ಕೆಲಸದ ಹುಡುಗ ಗಣೇಶ ಅದನ್ನು ಎಲ್ಲಿಟ್ಟಿದ್ದಾನೊ ಎಂದೆಲ್ಲ ಸಬೂಬು ಹೇಳಿ ನುಣುಚಿಕೊಳ್ಳುತ್ತಿದ್ದ. ಇದು ಆತನ ಮಾಮೂಲಿ ಮಾತೆಂದು ಎಲ್ಲರಿಗೂ ಗೊತ್ತಿತ್ತು.

"ಆಳುಗಳ ಕೆಲಸ ಎಂದರೆ ನಿಮಗೆ ಗೊತ್ತೇ ಇದೆ, ಯಾವ ಸಾಮಾನು ಎಲ್ಲಿಡುತ್ತಾರೊ ಹೇಳಲಾಗದು. ಅದರಲ್ಲೂ ನಮ್ಮ ಗಣೇಶ ಎಂಥ ಮೂರ್ಖ ಎಂಬುದನ್ನು ಹೇಳುವುದೇ ಬೇಡ. ಆದರೆ ಆತನನ್ನು ಕೆಲಸದಿಂದ ತೆಗೆದು ಹಾಕುವ ಮನಸ್ಸು ನನಗಿಲ್ಲ" ಎಂದು ಆ ಮಾತಿಗೆ ಮತ್ತಷ್ಟು ಸೇರಿಸುತ್ತಿದ್ದ.

ಮನೆತನದ ಗೌರವ ಕಾಪಾಡಲೆಂದು ಗಣೇಶ ಅಂಥ ಎಲ್ಲ ಬೈಗುಳಗಳನ್ನು ಸಹಿಸಿಕೊಳ್ಳುತ್ತಿದ್ದ.

ಆ ಗೆಳೆಯರ ಗುಂಪಿನಲ್ಲಿಯ ಒಬ್ಬ ಹೇಳುತ್ತಿದ್ದ "ಏನೂ ಮನಸ್ಸಿಗೆ ಹಚ್ಚಿಕೊಳ್ಳಬೇಡ ಠಾಕೂರ ದಾದಾ ಅದನ್ನು ಹುಡುಕುವ ತೊಂದರೆ ತೆಗೆದುಕೊಳ್ಳಬೇಡ, ನಾವು ನಿತ್ಯವೂ ಸೇದುವ ತಂಬಾಕು ನಮಗೆ ಒಳ್ಳೆಯದು. ನಿನ್ನ ಆ ಹಳೆಯ ತಂಬಾಕು ತುಂಬಾ ಖಾರವಾಗಿರುತ್ತದೆ."

ಆ ಮಾತಿಗೆ ಠಾಕೂರ ದಾದಾನ ಮೈಮೇಲಿನ ಭಾರ ಇಳಿದಂತಾಗಿ ನಿಟ್ಟುಸಿರು ಬಿಟ್ಟು ಕುಳಿತ ಮೇಲೆ ಮತ್ತೆ ಮಾತುಕತೆ ಮುಂದುವರೆಯುತ್ತಿತ್ತು.

ಆತನ ಅತಿಥಿ ಮಿತ್ರರು ಹೊರಟು ನಿಂತಾಗ, ಠಾಕೂರ ದಾದಾ ಬಾಗಿಲಿನವರೆಗೂ ಅವರನ್ನು ಹಿಂಬಾಲಿಸಿ, ಹೊಸ್ತಿಲು ದಾಟುವುದೇ ತಡ,

"ಅಂದ ಹಾಗೆ, ನನ್ನ ಜೊತೆ ಊಟ ಮಾಡಲು ಯಾವಾಗ ಬರುತ್ತೀರಿ" ಎಂದು ಕೇಳುತ್ತಿದ್ದ.

ನಮ್ಮೊಳಗೆ ಯಾರಾದರೂ ಒಬ್ಬರು ಉತ್ತರಿಸುತ್ತಿದ್ದರು.

"ಸದ್ಯಕ್ಕೆ ಬೇಡ ಠಾಕೂರ ದಾದಾ, ಸದ್ಯಕ್ಕಂತೂ ಬೇಡ. ಅದಕ್ಕಾಗಿ ನಂತರ ಒಂದು ದಿನ ನಿಶ್ಚಯಿಸೋಣ."

"ನೀವು ಹೇಳುವುದೇ ಸರಿ, ಅದಕ್ಕಾಗಿ ಮಳೆಗಾಲದವರೆಗೆ ಕಾಯುವುದೇ ಒಳಿತು. ಈಗ ಸೆಕೆಯೂ ಬಹಳ. ನಾನು ಕೊಡಬೇಕೆಂದಿರುವ ಮೃಷ್ಟಾನ್ನ ಭೂರಿ ಭೋಜನ ಈ ವಾತಾವರಣಕ್ಕೆ ಒಗ್ಗುವುದಿಲ್ಲ. ಅದರಿಂದ ನಮ್ಮ ಹೊಟ್ಟೆಯೂ ಕೆಟ್ಟು ಹೋಗಬಹುದು" ಎಂದು ಠಾಕೂರ ದಾದಾ ಉತ್ತರಿಸುತ್ತಿದ್ದ.

ಆದರೆ ಮಳೆಗಾಲ ಬಂದ ಮೇಲೆ ಆತನು ನೀಡಿದ್ದ ಊಟದ ಆಹ್ವಾನ ನೆನಪಿಗೆ ಬಾರದಂತೆ ಎಲ್ಲರೂ ಎಚ್ಚರವಹಿಸುತ್ತಿದ್ದರು. ಒಂದು ವೇಳೆ ಹೇಗೋ ತಪ್ಪಿ ಆ ಪ್ರಸ್ತಾಪ ಮುನ್ನೆಲೆಗೆ ಬಂದರೆ, ಇಂಥ ಈ ಮಳೆಯಲ್ಲಿ ಊಟದ ಏರ್ಪಾಟು ಮಾಡುವುದು ಸಾಧ್ಯವಾಗದ ಮಾತು. ಮಳೆಗಾಲ ಮುಗಿಯುವವರೆಗೂ ಕಾಯಬಹುದಲ್ಲ ಎಂದು ಯರೋ ಒಬ್ಬ ಗೆಳೆಯ ಸೂಚಿಸುತ್ತಿದ್ದ. ಹೀಗೆ ಊಟದ ಆಟ ಮುಂದೆ ಮುಂದೆ ಸಾಗುತ್ತಿತ್ತು.

ಅವನು ವಾಸಿಸುತ್ತಿದ್ದ ಆ ಮನೆ ಆತನ ಯೋಗ್ಯತೆಗೆ ತಕ್ಕುದ್ದಾಗಿರಲಿಲ್ಲ. ಆ ಕುರಿತು ನಾವು ಅವನೆದುರು ಸಂತಾಪ ವ್ಯಕ್ತಪಡಿಸಿದ್ದುಂಟು. ನೀನು ಅನುಭವಿಸುವ ಕಷ್ಟಗಳ ಬಗ್ಗೆ ನಮಗೆ ಚೆನ್ನಾಗಿ ಗೊತ್ತು ಎಂದು ಗೆಳೆಯರು ಆತನಿಗೆ ಸಾಂತ್ವನಪರ ಮಾತುಗಳನ್ನಾಡುತ್ತಿದ್ದರು. ಕಲ್ಕತ್ತೆಯಲ್ಲಿ ಒಂದು ಯೋಗ್ಯ ಮನೆ ಸಿಗುವುದು ಅಸಾಧ್ಯದ ಮಾತು ಎಂಬ ಅರಿವು ಆತನ ಗೆಳೆಯರಿಗಿತ್ತು. ಅವನಿಗೆ ತಕ್ಕುದಾದ ಒಂದು ಮನೆ ಹುಡುಕಲು ವರ್ಷಾನುಗಟ್ಟಲೆ ಅವರು ಪ್ರಯತ್ನಿಸಿದ್ದುಂಟು. ಅಲ್ಲದೆ ಆತನಿಗೊಂದು ಅಂಥ ಮನೆ ಹುಡುಕಿ ಕೊಡುವಷ್ಟು ಮೂರ್ಖರೂ ಅವರಾಗಿರಲಿಲ್ಲ. ಠಾಕೂರ ದಾದಾ ವೈರಾಗ್ಯ ಭಾವದ ಒಂದು ದೀರ್ಘ ನಿಟ್ಟುಸಿರು ಬಿಟ್ಟು ಹೇಳಿದ್ದ, "ಹೋಗಲಿ ಬಿಡಿ, ನಾನು ಈ ಮನೆಯಲ್ಲೇ ಇರಬೇಕೆಂದಾಗಿದ್ದರೆ ಇಲ್ಲೇ ಇದ್ದು ಬಿಡುವೆ." ನಂತರ ಒಂದಿಷ್ಟು ಹಸನ್ಮುಖ ಭಾವದಿಂದ ಇನ್ನೊಂದು ಮಾತನ್ನೂ ಸೇರಿಸಿದ್ದ, "ಆದರೆ ನಿಮಗೆ ಗೊತ್ತಲ್ಲ, ನನ್ನ ಗೆಳೆಯರನ್ನು ಬಿಟ್ಟು ದೂರ ಇರುವುದು ನನ್ನಿಂದಾಗದು. ನಾನು ನಿಮ್ಮ ಬಳಿಯೇ ಇರಬೇಕು ಎಂದಾದರೆ ಈ